ಶ್ರೀಸುಯಮೀರಾಘವೇಂದ್ರ
ಪ್ರಕಾಶನ ಸಂಖ್ಯೆ - 29

ಶ್ರೀಸುಶೀಲೇಂದ್ರವಿಜಯಮಾಲಾ
ಸಂಖ್ಯೆ - 19

ಕಮಲೇಶ ಕುಸುಮ - 9

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮವಿರಚಿತಃ

ಮಾನುಷದೇಹೇ ವಿದ್ಯಮಾನ ಭಗವದ್ರೂಪಸಂಖ್ಯಾವಿಚಾರಃ

ಅನುವಾದಕರು :

ವಿದ್ವಾನ್ ಹಯವದನ ಪುರಾಣಿಕರು
ಶ್ರೀ ಗುರುಸಾರ್ಭೌಮ ಸಂಸ್ಕೃತ ವಿದ್ಯಾಪೀಠ
ಮಂತ್ರಾಲಯ

ಪ್ರಕಾಶಕರು :

ಶ್ರೀಸುಯಮೀರಾಘವೇಂದ್ರ ಸಂಶೋಧನ ಕೇಂದ್ರ
ನಂಜನಗೂಡು – ಬೆಂಗಳೂರು

2010

|| ಶ್ರೀಃ ||

|| ಶ್ರೀಮೂಲರಾಮೋ ವಿಜಯತೇತರಾಮ್ ||

|| ಶ್ರೀಗುರುರಾಜೋ ವಿಜಯತೇ ||

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮವಿರಚಿತಃ

ಮಾನುಷದೇಹೇ ವಿದ್ಯಮಾನ ಭಗವದ್ರೂಪಸಂಖ್ಯಾವಿಚಾರಃ

ಕನ್ನಡಾನುವಾದ :

ವಿದ್ವಾನ್ ಹಯವದನ ಪುರಾಣಿಕರು

ಶ್ರೀಗುರುಭ್ಯೋ ನಮಃ ||

ಅಥ ಭಗವದ್ರೂಪಾಣಾಂ ಸ್ಥಿತಿಪ್ರಕಾರೋ ನಿರೂಪ್ಯತೇ || ಅಸ್ಮಿನ್ಜೀವೇ ಜೀವಾಂಗುಷ್ಠಾಗ್ರ-ಪರಿಮಿತರೂಪಂ ದೇಹೇ ದೇಹಾಂಗುಷ್ಠಪರಿಮಿತಂ ರೂಪಮಿತಿ ಹೃತ್ಕರ್ಣಿಕಾಮೂಲೇ ಬಿಂಬ-ರೂಪಮ್ || ಕರ್ಣಿಕಾಗ್ರೇ ಪ್ರಾಜ್ಞರೂಪಮ್ || ಹೃದಯಾಕಾಶೇ ಪ್ರಾದೇಶರೂಪಮ್ ।

ಸಮಗ್ರದೇಹೇ ಪುರುಷರೂಪಮ್ || ಪಾದಾಂಗುಷ್ಠಗತಂ ಸಕಲದೇಹಧಾರಕಂ ಉಪೇಂದ್ರ-ರೂಪಮ್ || ನೇತ್ರಾಂತರ್ಗತಂ ಸತ್ ನೇತ್ರಾರ್ಥಸಂಗತ್ಯಾ ಪ್ರಾಕಾಶನಪ್ರದಂ ವಾಮನರೂಪಮ್ || ಓಷ್ಠದ್ವಯಪಿಧಾನವಾಗೀಂದ್ರಿಯಗೃಹೇ ವಾಕ್ಪಾಟವಪ್ರದಂ ಶ್ರೀರೂಪಮ್ । ದೇಹೇ ಭುಕ್ತಚತು-ರ್ವಿಧಾನ್ನಪಾಚಕಂ ವೈಶ್ವಾನರರೂಪಮ್ ।

ಏತಸ್ಮಿನ್ನೇವ ದೇಹೇ ಅನ್ನಮಯಪ್ರಾಣಮಯ ಮನೋಮಯವಿಜ್ಞಾನಮಯಾನಂದಮಯಾಖ್ಯ-ಪಂಚಕೋಶೇ ಅಂಗಾಂಗಿಭಾವೇನ ಮಿಲಿತಂ ಅನಿರುದ್ಧಪ್ರದ್ಯುಮ್ನಸಂಕರ್ಷಣವಾಸುದೇವನಾರಾಯ-ಣಾಖ್ಯಂ ಪಂಚರೂಪಮ್ ||

ಮುಖೇ ದಂತಾದೌ ಕೇಶವಾದಿಚತುರ್ವಿಂಶತಿರೂಪಮ್ || ಶಿರ ಆದೌ ಅಜಾದಿಏಕಪಂಚಾಶ-ದ್ರೂಪಮ್ || ದೇಹಮಧ್ಯೇ ಮೂಲಾಧಾರಾತ್ ಋಜ್ವೀ ಸುಷುಮ್ನಾ ವಜ್ರಿಕಾ ಆರ್ಯಾ ಪ್ರಕಾಶಿನೀ ವೈದ್ಯುತಾ ಬ್ರಹ್ಮನಾಡೀತಿ ವರ್ತತೇ । ತತ್ರ ಸ್ಥಿತಿಪ್ರಕಾರಃ || ಮಧ್ಯೇ ಸುಷುಮ್ನಾ ಯಾಬ್ರಹ್ಮನಾಡೀ ।

ಪಶ್ಚಿಮೇ ವಜ್ರಿಕಾ । ಉತ್ತರೇ ಆರ್ಯಾ । ಪೂರ್ವೇ ಪ್ರಕಾಶನೀ । ದಕ್ಷಿಣೇ ವೈದ್ಯುತೇತಿ । ಏತಾಸು ಪಂಚನಾಡೀಷು ನಾಭೇರಧಃ ಷಡಂಗುಲಿ ಪ್ರಮಾಣಾದಾರಭ್ಯ ಷಟ್‌ಪದ್ಮಾನಿ ಸಂತಿ । ಮೂಲಾಧಾರೇ ಚತುರ್ದಲರಕ್ತಪದ್ಮಾನಿ । ತದುಪರಿ ತ್ರಿಕೋಣಾಗ್ನಿಮಂಡಲೇ ಶಾರ್ಙ್ಗಬಾಣಚಕ್ರಶಂಖಯುತೋ ಹರಿತ-ವರ್ಣಃ ಪ್ರದ್ಯುಮ್ನಃ ಪಂಚರೂಪಸ್ತಿಷ್ಠತಿ ॥ ಪಶ್ಚಿಮೇ ವಜ್ರಿಕಾಯಾಂ ಪದ್ಮಮಂಡಲೇ ಶಾರ್ಙ್ಗಬಾಣ-ಚಕ್ರಶಂಖಯುಕ್ತಃ ಹರಿತವರ್ಣಃ ಪ್ರದ್ಯುಮ್ನಃ । ಉತ್ತರಸ್ಥಾರ್ಯಾನಾಡ್ಯಾಂ ಪದ್ಮಮಂಡಲೋಪರಿ ನೀಲವರ್ಣಃ ಚಕ್ರಶಂಖಾಸಿಚರ್ಮಯುಕ್ತೋಽನಿರುದ್ಧಸ್ತಿಷ್ಠತಿ ॥ ಪೂರ್ವದಿಶಿ ಪ್ರಕಾಶಿನೀನಾಡೀಸ್ಥ-ಪದ್ಮಮಂಡಲೇ ಶ್ವೇತವರ್ಣಃ ಚಕ್ರಶಂಖಗದಾಪದ್ಮಯುಕ್ತಃ ವಾಸುದೇವಸ್ತಿಷ್ಠತಿ ॥ ದಕ್ಷಿಣೇ ವೈದ್ಯುತ-ನಾಡೀಸ್ಥಪದ್ಮಮಂಡಲೋಪರಿ ಪಿಂಗಲವರ್ಣಃ ಹಲಮುಸಲಚಕ್ರಬ್ರಹ್ಮಶಂಖಯುತಃ ಸಂಕರ್ಷಣಸ್ತಿಷ್ಠತಿ ॥ ಮಧ್ಯೇ ನಾಡೀಸ್ಥಪದ್ಮೋಪರಿ ರಕ್ತವರ್ಣಃ ಚಕ್ರಶಂಖಗದಾಪದ್ಮಹಸ್ತಃ ನಾರಾಯಣಸ್ತಿಷ್ಠತಿ ॥ ಏತಾಸ್ವೇವ ನಾಡೀಷು ನಾಭಿಪ್ರದೇಶೇ ಷಡ್ದಲ ರಕ್ತಪದ್ಮಹಸ್ತಃ ನಾರಾಯಣಸ್ತಿಷ್ಠತಿ ॥ ಏತಾಸ್ವೇವ ನಾಡೀಷು ನಾಭಿ-ಪ್ರದೇಶೇ ಷಡ್ದಲ ರಕ್ತಪದ್ಮೇಷು ಷಟ್‌ಕೋಣವಾಯುಮಂಡಲೇಷು ಪೂರ್ವವತ್ಪಂಚಮೂರ್ತಯಃ ಪ್ರದ್ಯುಮ್ನಾದಯಃ ಸಂತಿ ॥ ಆಸ್ವೇವ ಹೃದಯೇ ಅಷ್ಟದಲರಕ್ತಪದ್ಮೇಷು ದ್ವಾದಶಾರಸೂರ್ಯಮಂಡಲೇಷು ಪೂರ್ವವತ್ ಪ್ರದ್ಯುಮ್ನಾದಯಃ ಪಂಚಮೂರ್ತಯಃ ಸಂತಿ ॥ ಆಸ್ವೇವ ಇಂದ್ರಯೋನಿಪ್ರದೇಶೇ ಶ್ವೇತ-ಪದ್ಮೇಷು ದ್ವಿದಲೇಷು ವರ್ತುಲಚಂದ್ರಮಂಡಲಾನಿ । ತೇಷ್ವಪಿ ಪ್ರದ್ಯುಮ್ನಾದಯಃ ಪಂಚ ಮೂರ್ತಯಃ ತಿಷ್ಠಂತಿ ॥ ನಾಡೀಷು ಭ್ರೂಮಧ್ಯೇ ಚತುರ್ದಲಶ್ವೇತಪದ್ಮೇಷು ವರ್ತುಲಚಂದ್ರಮಂಡಲಾನಿ ತತ್ರ ಚ ಪ್ರದ್ಯುಮ್ನಾದಯಃ ಪಂಚ ಸಂತಿ । ನಾಡೀಷು ಮೂರ್ಧ್ನಿ ದ್ವಾದಶದಲಶ್ವೇತಪದ್ಮೇಷು ವರ್ತುಲಚಂದ್ರ-ಮಂಡಲೇಷು ಏವಂ ಪಂಚಮೂರ್ತಯಃ ಸಂತಿ ॥

ಏತಾಸಾಂ ನಾಡೀನಾಂ ಪರಿತಃ ಚತುರ್ನಾಡ್ಯಃ ಸಂತಿ । ಪೂರ್ವೇ ವಜ್ರಿಕಾ । ತತ್ರ ವಾಸುದೇವಃ । ದಕ್ಷಿಣೇ ವೈದ್ಯುತಾಯಾಂ ಸಂಕರ್ಷಣಃ । ಪಶ್ಚಿಮೇ ಇಡಾಯಾಂ ಪ್ರದ್ಯುಮ್ನಃ । ಉತ್ತರೇ ಪಿಂಗಲಾಯಾಂ ನಾರಾಯಣಃ । ಸಮಾನಪ್ರದೇಶೇಷು ತಿಷ್ಠತಿ । ಏತಾನಿ ನಾಡೀಸ್ಥಾನಾನಿ ನಿರೂಪಿತಾನಿ ॥

ಅಸ್ಮಿನ್ ದೇಹೇ 72 ಸಹಸ್ರನಾಡ್ಯಃ । ತತ್ರ 36 ಸಹಸ್ರನಾಡ್ಯಃ ವಾಮಾದ್ದಕ್ಷಿಣಪ್ರಸಾರಿತಾಃ । ತಾವತ್ಯಃ ದಕ್ಷಿಣಾತ್ ವಾಮೇ ಪ್ರಸಾರಿತಾಃ । ಏವಂ 72 ಸಹಸ್ರನಾಡೀಷು ಬೃಹತೀಋಕ್‌ಸ್ಥ 36 ಸಹಸ್ರಸ್ವರವ್ಯಂಜನಭೇದೇನ ಪ್ರತಿಪಾದ್ಯಾನಿ ತಾನ್ಯೇವ ಪುರುಷಾಯುಷೋ ದಿವಸ 36 ಸಹಸ್ರರಾತ್ರೀ 36 ಸಹಸ್ರೇಷು ನಿಯಾಮಕಾನಿ ರಾತ್ರಿನಿಯಾಮಕಾನಿ ಸ್ತ್ರೀರೂಪಾಣಿ ದಿನನಾಮಕಾನಿ ಪುಂರೂಪಾಣಿ । ಏವಂ ಸ್ತ್ರೀಪುಂರೂಪಾಣಿ ಸ್ತ್ರೀಪುಂಭಾವೇನ ಸಂತಿ ॥

ಅಸ್ಮಿನ್ಮನುಷ್ಯೇ ಮನುಷ್ಯಾಕಾರತಯಾ ಪ್ರದ್ಯುಮ್ನಸಂಕರ್ಷಣಾದಿ ರೂಪಾಣಿ ಸಂತಿ । ಅಸ್ಮಿನ್ ದೇಹೇ 35000000 ರೋಪಾಣಿ ಸಂತಿ ॥ ತೇಷು ಹಿಂಕಾರನಾಮಕಪ್ರದ್ಯುಮ್ನರೂಪಮ್ । ತ್ವಚಿ

ಪ್ರಸ್ತಾವನಾಮಕಂ ವಾಸುದೇವರೂಪಮ್ । ಮಾಂಸೇ ಉದ್ಗೀಥನಾಮಕಂ ನಾರಾಯಣರೂಪಮ್ । ಅಸ್ಥಿಷು ನಿಧನನಾಮಕಂ ಸಂಕರ್ಷಣರೂಪಮ್ ॥ ದೇಹಪೂರ್ವಾರ್ಧೇ ಸಂಕರ್ಷಣರೂಪಮ್ । ಮಧ್ಯೇ ಪ್ರದ್ಯುಮ್ನರೂಪಮ್ । ಅಧರಾರ್ಧೇ ವಾಸುದೇವರೂಪಮ್ ॥ ಸಮಗ್ರರೂಪೇ ಅನಿ-ರುದ್ಧರೂಪಮ್ ॥ ಚಕ್ಷುಷಿ ಸೂರ್ಯಾಂತರ್ಗತಕಪಿಲರೂಪಮ್ ॥ ಹೃದಯೇ ಹಂಸರೂಪಮ್ । ರೇತಸಿ ಯಜ್ಞಪುರುಷನಾಮಕಪ್ರದ್ಯುಮ್ನರೂಪಂ ಪರಶುರಾಮರೂಪಂ ಚ । ನಾಸಿಕಾವಾಯೌ ನೃಸಿಂಹ-ರೂಪಮ್ ॥ ಅಸ್ಥಿನಿ 360 ಮಜ್ಜಾಸ್ಥಾನಾನಿ । 360 ॥ ತಾಲೌ ಪ್ರದ್ಯುಮ್ನರೂಪಮ್ ।

ಪುರುಷದಕ್ಷಿಣಾಕ್ಷಿಗತಮೇಕೋನವಿಂಶತಿ ಮುಖೇಷು ಮಧ್ಯೇ ಮಧ್ಯಮುಖಂ ಗಜಾಕಾರಂ ದ್ವಿಪ-ತುಂಡಾಖ್ಯಂ ಚತುರ್ಬಾಹು ಸಪ್ತಾಂಗಯುಕ್ತಂ ಜೀವಜಾಗೃದವಸ್ಥಾನಿಯಾಮಕಂ ಜಾಗ್ರದವಸ್ಥಾ-ವಗತಸಕಲ ಶುಭವಸ್ತುಸಾರಭೋಕ್ತೃವಿಶ್ವರೂಪಮ್ ॥ ಕಂಠಗತಂ ಜೀವಸ್ವಪ್ನಾವಸ್ಥಾನಿಯಾಮಕ ಸ್ವಪ್ನಾ-ವಸ್ಥಾಗತಸಕಲ ಶುಭ ವಸ್ತುಸಾರಭೋಕ್ತೃಂ ಸುಷುಪ್ತ್ಯವಸ್ಥಾನಿಯಾಮಕಂ ವಿಶ್ವಮೂರ್ತಿಲಕ್ಷಣೋಪೇತಂ ತೈಜಸರೂಪಮ್ ॥ ಸುಷುಮ್ನಾಯಾಂ ಹೃದಯೇ ಪ್ರಾಜ್ಞರೂಪಮ್ । ಅತ್ರ ಶಿರಃ ಕಪಾಲೋಪರಿ ದ್ವಾದಶಾಂಗುಲಿವ್ಯವಧಾನೇನ । ಮುಕ್ತ್ಯವಸ್ಥಾ ನಿಯಾಮಕಂ ಮುಕ್ತ್ಯವಸ್ಥಾಗತಬಾಹ್ಯವಸ್ತು ಸಾರ ಭೋಕ್ತೃತುರೀಯಂ ರೂಪಮ್ । ಅಸ್ಮಿನ್ ದೇಹೇ ತತ್ತಚ್ಚುಭಕರ್ಮಾನುಸಾರಿಜೀವಭೋಗ್ಯಪದಾರ್ಥ ಸಾರಭೋಕ್ತೃ । ಆತ್ಮಾಂತರಾತ್ಮ ರೂಪಮ್ । ಜೀವೇ ಜೀವಗೃಹಭೂತಪರಮಾತ್ಮ ಜ್ಞಾನಾತ್ಮರೂಪಮ್ ।

ಪ್ರಾಗೇಸ್ಥಿತಂ ಸತ್ ಯೋಗಪ್ರದಂ ಯೋಗನಾಮಕಂ ರೂಪಮ್ । ಅಪಾನೇ ಸ್ಥಿತಂ ಸತ್ ಕ್ಷೇಮನಾಮಕಂ ಕ್ಷೇಮಪ್ರದಂ ರೂಪಮ್ । ಹಸ್ತಯೋಃ ಸ್ಥಿತಂ ತತ್ತತ್ಕರ್ಮಪ್ರೇರಕಂ ಕರ್ಮನಾಮಕಂ ರೂಪಮ್ । ಪಾದಯೋಃ ಸ್ಥಿತ್ವಾ ತತ್ತದ್ಗತಿಪ್ರೇರಕಂ ಗತಿನಾಮಕಮ್ ॥ ಪಾಯೌ ಸ್ಥಿತ್ವಾ ವಿಸರ್ಗ-ಪ್ರೇರಕಂ ವಿಮುಕ್ತಿನಾಮಕಂ ರೂಪಮ್ । ಅಸ್ಮಿನ್‌ದೇಹೇ ಆಹಂಕಾರಿಕರುದ್ರಾಂತರ್ಗತ ಸಂಕರ್ಷಣ-ರೂಪಮ್ । ಮನೋಽಭಿಮಾನಿ ಚಂದ್ರಾಂತರ್ಗತಂ ಚಂದ್ರನಾಮಕಂ ರೂಪಮ್ । ಬುದ್ಧಿಪ್ರೇರಕಂ ಉಮಾಂತರ್ಗತಂ ಸ್ತ್ರೀರೂಪಮ್ ॥ ಚಿತ್ತಪ್ರೇರಕಂ ವಿಷ್ಣುನಾಮಕಂ ರೂಪಮ್ । ಶ್ರೋತ್ರಯೋಃ ಸ್ಥಿತ್ವಾ ಶ್ರವಣಶಕ್ತಿಪ್ರದಂ ದಿಗ್ದೇವತಾಂತರ್ಗತಂ ತನ್ನಾಮಕಂ ವಿಷ್ಣುರೂಪಮ್ । ನೇತ್ರಯೋಸ್ತದಭಿಮಾನಿ-ಸೂರ್ಯೇ ಸ್ಥಿತಂ ತನ್ನಾಮಕಂ ರೂಪಮ್ ॥ ತ್ವಚಿ ವಾಯ್ವಂತರ್ಗತಂ ತನ್ನಮಕಂ ರೂಪಮ್ । ರಸನೇಂದ್ರಿಯೇ ವರುಣಾಂತರ್ಗತಂ ವರುಣನಾಮಕಂ ರೂಪಮ್ । ಘ್ರಾಣೇಂದ್ರಿಯೇ ಅಶ್ವಿನ್ಯಂಗರ್ತತಂ ತನ್ನಾಮಕಂ ರೂಪಮ್ ॥ ವಾಗಿಂದ್ರಿಯೇ ಅಗ್ನ್ಯಂತರ್ಗತಂ ಪರಶುರಾಮರೂಪಮ್ । ಹಸ್ತಯೋ-ರ್ದಕ್ಷಾಂತರ್ಗತಂ ದಕ್ಷನಾಮಕಂ ರೂಪಮ್ । ಪಾದಯೋಃ ಜಯಂತಾರ್ಗತಂ ಜಯಂತನಾಮಕಂ ರೂಪಮ್ ॥ ಪಾಯೌ ಮಿತ್ರಾಂತರ್ಗತಂ ಮಿತ್ರನಾಮಕಂ ರೂಪಮ್ ॥ ಗುಹ್ಯೇ ಮನ್ವಂತರ್ಗತಂ ಗುಹ್ಯನಾಮಕಂ ರೂಪಮ್ ।

ಏವಮದ್ಭುತಚರಿತಾನಿ ಅನಂತಕ್ರಿಯಾಃ ಅನಂತಮಹಿಮಾನಃ ಸಂತಿ । ಅಸ್ಮಿನ್ ದೇಹೇ ನವಕೋಟಿದೇವಾಃ ಸಂತಿ ॥ ತೇಷಾಂ ದೇಹೇ ನೀಚನೀಚೇಷು ಉತ್ತಮೋತ್ತಮಾಃ ನಿಯಾಮಕತಯಾ ವರ್ತಂತೇ ॥ ತೇಷಾಂ ದೇಹೇ ಉತ್ಕ್ರಮಾತ್ ಸ್ಥಿತರೂಪಪರಂಪರಾ ವರ್ತತೇ ॥ ಅಸ್ಯ ದೇಹಸ್ಯ ಅನಂತಾನಂತಶಃ ತೇಷಾಂ ನಿಯಾಮಕರೂಪಾಣ್ಯನಂತಾನಿ । ಅಸ್ಮಿನ್ ದೇಹೇ ಜೀವಸ್ಯ ಅನಂತಕರ್ಮಾಣಿ ತೇಷಾಂ ಅನಂತಾಭಿಮಾನಿನಃ ಸಂತಿ ॥ ತೇಷ್ವನಂತರೂಪಾಣಿ ವರ್ತಂತೇ । ದೇಹೇ ಲಕ್ಷ್ಮೀರನಂತರೂಪೇಣ ಪರಮಾತ್ಮಪೂಜಾಂ ಕರೋತಿ ॥ ಬ್ರಹ್ಮವಾಯುಭಾರತೀಸರಸ್ವತ್ಯಃ ಅನಂತಾನಂತರೂಪೈರ್ಲಕ್ಷ್ಮೀಸೇವಾಂ ಕುರ್ವಂತಿ ॥ ಏವಂ ಲಕ್ಷ್ಮೀಮಹಿಮಾ ॥ ಬ್ರಹ್ಮವಾಯ್ವೋಃ ಅನಂತಾನಂತರೂಪಾಣಿ ಸಂತಿ ॥ ತನ್ನಿಯಾಮಕಾನ್ಯನಂತರೂಪಾಣಿ । ಏವಂ ಸರಸ್ವತೀಭಾರತೀರೂಪಾಣಿ ಅನಂತಾನಿ ತನ್ನಿಯಾಮಕಾನ್ಯನಂತ ರೂಪಾಣಿ ಸಂತಿ ॥

ಅಸ್ಮಿನ್ದೇಹೇ ಸುಷುಮ್ನಾನಾಡೀಮಧ್ಯೇ ಹೃದಯ ಪ್ರದೇಶೇ ಅಷ್ಟದಲಪದ್ಮೋಪರಿ ದ್ವಾದಶದೇವತಾತ್ಮಕೇ ಪೀಠೇ ವಿಮಲಾದಿರೂಪಾಣಿ ಸಂತಿ । ಪೀಠಚತುರ್ದಿಕ್ಷುಸೋಪಾನಭೂತಾತ್ಮಾಂತರಾತ್ಮ ಪರಮಾತ್ಮ ಜ್ಞಾನಾತ್ಮರೂಪಾಣಿ ಸಂತಿ । ಏತತ್ ಪೀಠೋಪರಿ ಲಕ್ಷ್ಮ್ಯಾತ್ಮ ಕಾಷ್ಟದಲಕಮಲೇ ವಿಶ್ವಾದ್ಯಷ್ಟಮೂರ್ತಯಃ ಸಂತಿ । ಕರ್ಣಿಕಾಮಧ್ಯೇ ಶ್ರೀನಾರಾಯಣಃ ಸ ಸ್ವಮೂರ್ತಿಗಣಮಧ್ಯಗಃ । ಸ್ವಮೂರ್ತಯಃ ಕೃದ್ಧೋಲ್ಕಾದಯಃ ॥ 5 ॥ ವಾಸುದೇವಾದಯಃ ॥ 4 ॥ ಕೇಶವಾದಯಃ ॥ 24 ॥ ಮತ್ಸ್ಯಾದಯಃ ॥ 12 ॥ ಶಕ್ತಿಪ್ರತಿಷ್ಠಾದಯಃ ॥ 11 ॥ ಏತಾಃ ಸ್ವಮೂರ್ತಯಃ । ಏತನ್ಮೂರ್ತಿಮಧ್ಯೇ ನಾರಾಯಣಃ ವರ್ತತೇ । ತಸ್ಯ ಸ್ಥಾನಂ ಲಕ್ಷ್ಮ್ಯಾತ್ಮಕಮಂಡಪಃ । ತಸ್ಯ ಮಂಟಪಸ್ಯ ಪಂಚ ದ್ವಾರಾಣಿ । ಪೂರ್ವಾದಿದ್ವಾರೇ ಪ್ರಾಣಾದಿನಾಮಾನಃ ಸೂರ್ಯ ಚಂದ್ರಾಗ್ನೀಂದ್ರವಾಯವ ಶ್ರೀಪ್ರಾಣಭಾರತ್ಯಶ್ಚ ಪಾಲಕಾ ಇತಿ ಸಕಲಮತಿಮಂಗಲಮ್ ॥

ಇತಿ ಶ್ರೀರಾಘವೇಂದ್ರತೀರ್ಥಕೃತಃ

ಮಾನುಷದೇಹೇ ವಿದ್ಯಮಾನ ಭಗವದ್ರೂಪಸಂಖ್ಯಾವಿಚಾರಃ ॥

★ ★ ★

ಮಾನುಷ ದೇಹದಲ್ಲಿರುವ ಭಗವದ್ರೂಪ ಸಂಖ್ಯಾವಿಚಾರ

ಮನುಷ್ಯದೇಹದಲ್ಲಿ ಭಗವದ್ರೂಪಗಳು ಯಾವ ಪ್ರಕಾರದಿಂದ ಇರುತ್ತವೆ ಎಂಬುದನ್ನು ನಿರೂಪಿಸುತ್ತೇವೆ.

ಈ ಜೀವನಲ್ಲಿ ಜೀವಾಂಗುಷ್ಠಾಗ್ರಪರಿಮಿತಿ ರೂಪನಾಗಿ, ದೇಹದಲ್ಲಿ ದೇಹಾಂಗುಷ್ಠಾಗ್ರಪರಿಮಿತ ರೂಪನಾಗಿ ಹೃದಯಕಮಲ ಕರ್ಣಿಕಾ ಮೂಲದಲ್ಲಿ ಬಿಂಬರೂಪಿ ಹರಿ ಇರುತ್ತಾನೆ. (ಪರಮಾಣುಪ್ರದೇಶದಲ್ಲಿಯೂ ಅನಂತ ಜೀವರಾಶಿ ಇರುವುದರಿಂದ ಪರಮಾಣುವಿಗಿಂತಲೂ ಸೂಕ್ಷ್ಮ ಜೀವನ ಸ್ವರೂಪ ಶರೀರವಿರುತ್ತದೆ. ಆ ಸ್ವರೂಪ ಶರೀರದ ಹೃದಯಕಮಲಕರ್ಣಿಕಾ ಮೂಲದಲ್ಲಿ ಸ್ವರೂಪಶರೀರದ ಅಂಗುಷ್ಠದ ಅಗ್ರ ಪರಿಮಾಣದ ರೂಪದಿಂದ ಬಿಂಬರೂಪಿ ಮೂಲೇಶ ಹರಿ ಇರುತ್ತಾನೆ. ಸ್ಥೂಲ ಶರೀರ ದೊಡ್ಡದಿರಲಿ, ಸಣ್ಣದಿರಲಿ ಆ ಶರೀರದ ಅಂಗುಷ್ಠಾಗ್ರ ಪರಿಮಾಣದ ರೂಪದಿಂದ ಆ ಶರೀರದ ಹೃದಯಕಮಲ ಕರ್ಣಿಕಾ ಮೂಲದಲ್ಲಿ ಈ ಬಿಂಬರೂಪಿ ಇರುತ್ತಾನೆ. ಸ್ಥೂಲ ಹೃದಯದಲ್ಲಿರುವ ಬಿಂಬರೂಪ ಆತ್ಮ ಸ್ವರೂಪಶರೀರದ ಸೂಕ್ಷ್ಮ ಹೃದಯದಲ್ಲಿರುವ ಬಿಂಬರೂಪ ಅಂತರಾತ್ಮ. ಕರ್ಣಿಕಾಮೂಲದಲ್ಲಿರುವುದರಿಂದ ಮೂಲೇಶನೆಂದು ಇಬ್ಬರಿಗೂ ಹೆಸರು.

ಕರ್ಣಿಕಾಗ್ರದಲ್ಲಿ ಪ್ರಾಜ್ಞರೂಪವಿದೆ (ಇದು ಜೀವನ ಅಂಗುಷ್ಠಪ್ರಮಾಣವಾಗಿದೆ. ಅಗ್ರದಲ್ಲಿರುವುದರಿಂದ ಅಗ್ರೇಶ-ನೆಂದೂ ಇದಕ್ಕೆ ಹೆಸರು. ಮೂಲೇಶನ ಪಾದವನ್ನು ಆಶ್ರಯಿಸಿ ಮುಖ್ಯಪ್ರಾಣ, ಮುಖ್ಯಪ್ರಾಣನ ಪಾದವನ್ನಾಶ್ರಯಿಸಿ ಜೀವ ಸದಾ ಇರುತ್ತಿದ್ದರೂ ಸುಷುಪ್ತಿಕಾಲದಲ್ಲಿ ಮೂಲೇಶ ಜೀವನೊಂದಿಗೆ ಅಗ್ರಕ್ಕೆ ಹೋಗಿ ಅಗ್ರೇಶನೊಂದಿಗೆ ಐಕ್ಯಹೊಂದುವು-ದರಿಂದ ಮೂಲೇಶನೊಂದಿಗೇ ಅಗ್ರಕ್ಕೆ ಬರುವ ಜೀವನಿಗೆ ಅಗ್ರೇಶನ, ಅಂದರೆ ಪ್ರಾಜ್ಞನ ಆಲಿಂಗನ ಆಗ ಸಿಗುತ್ತದೆ.)

ಹೃದಯಾಕಾಶ ಚೋಟುದ್ದ ಪ್ರಮಾಣದ್ದು. ಆದರಿಂದ ಅಲ್ಲಿ ವ್ಯಾಪಿಸಿರುವ ಅಷ್ಟೇ ಪರಿಮಾಣದ ಅಂದರೆ ಪ್ರಾದೇಶ ಪರಿಮಾಣದ ಪ್ರಾದೇಶ ಎಂಬ ಭಗವದ್ರೂಪ ಜೀವನಿಗೆ ಆಶ್ರಯ ಸ್ಥಾನ ವೆನಿಸಿದ್ದಾನೆ.

ಇಡೀ ಶರೀರದಲ್ಲಿ ವ್ಯಾಪಿಸಿರುವುದು ಭಗವಂತನ ಪುರುಷ ಎಂಬ ರೂಪ. ಪಾದಾಂಗುಷ್ಠದಲ್ಲಿ ಇಡೀ ಶರೀರಕ್ಕೆ ಧಾರಕವಾದ ಉಪೇಂದ್ರರೂಪವಿದೆ. ಕಣ್ಣಿನಲ್ಲಿ ಕಣ್ಣದೃಷ್ಟಿಗೆ ಗೋಚರವಾಗುವ ಪದಾರ್ಥಗಳ ಜ್ಞಾನಕ್ಕೆ ಶಕ್ತಿ ನೀಡುವ ವಾಮನರೂಪವಿದೆ. ಎರಡು ತುಟಿಗಳು ಮುಚ್ಚಿದರೆ ಮಾತು ಹೊರಡುವುದಿಲ್ಲ, ಅಂಥ ವಾಗಿಂದ್ರಿಯದಲ್ಲಿ ಹರಿಯ ಶ್ರೀ ಎಂಬ ಸ್ತ್ರೀರೂಪ ನಿಯಾಮಕವಾಗಿದೆ. ದೇಹದಲ್ಲಿ ಉಂಡ ಭಕ್ಷ್ಯಭೋಜ್ಯ ಲೇಹ್ಯಪೇಹಗಳೆಂಬ ಚತುರ್ವಿಧವಾದ ಅನ್ನವನ್ನು ಅರಗಿಸಿಕೊಡುವ ಭಗವದ್ರೂಪ ವೈಶ್ವಾನರ.

ಈ ಶರೀರದಲ್ಲಿ ಒಳಗೆ ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ ಆನಂದಮಯ ಎಂದು ಪಂಚಕೋಶಗಳಿವೆ. ಅವುಗಳಲ್ಲಿ ಕ್ರಮವಾಗಿ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ವಾಸುದೇವ ನಾರಾಯಣ ಎಂಬ ಪಂಚರೂಪಗಳಿವೆ. ಈ ಐದು ರೂಪಗಳಿಗೂ ಎಡ-ಬಲ ಕೈಗಳು, ಕಾಲು, ಮಧ್ಯಶರೀರ, ತಲೆಗಳು ಕ್ರಮವಾಗಿ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ವಾಸುದೇವ ರೂಪಗಳೇ ಆಗಿರುತ್ತವೆ. ತನಗೆ ತಾನೇ ಅಂಗವಾಗಿ ಭಗವಂತ ಕ್ರೀಡಿಸುತ್ತಾನೆ. ಮನುಷ್ಯನ ಬಾಯಿ ಹಲ್ಲು ಮುಂತಾದವುಗಳಲ್ಲಿ ಕೇಶವಾದಿ ಚತುರ್ವಿಂಶತಿ ರೂಪಗಳಿವೆ. ತಲೆ ಮುಂತಾದವುಗಳಲ್ಲಿ ಅಜ ಆನಂದ ಮುಂತಾದ ಐವತ್ತೊಂದು ಮಾತೃಕಾಪ್ರತಿಪಾದ್ಯ ರೂಪಗಳಿವೆ.

ಶರೀರ ಮಧ್ಯದಲ್ಲಿ ಮೂಲಾಧಾರದಿಂದ ತೊಡಗಿ ಋಜುವಾಗಿ ಸುಷುಮ್ನಾನಾಡಿ ತಲೆಯವರೆಗೆ ಹರಡಿದೆ. ಅದು ಐದು ಎಳೆಗಳುಳ್ಳ ದಾರದಂತೆ ವಜ್ರಿಕಾ ಆರ್ಯಾ ಪ್ರಕಾಶನೀ ವೈದ್ಯುತಾ ಬ್ರಹ್ಮನಾಡಿ ಎಂಬ ಐದು ನಾಡಿಗಳು ಸೇರಿ ಆಗಿರುವ ಒಂದು ನಾಡಿ. ಅದರಲ್ಲಿ ಐದು ನಾಡಿಗಳಿರುವ ಪ್ರಕಾರ ಹೀಗೆ – ಸುಷುಮ್ನೆಯಲ್ಲಿ ನಡುವೆ ಇರುವುದು ಬ್ರಹ್ಮನಾಡಿ – ಪಶ್ಚಿಮದಲ್ಲಿ ವಜ್ರಿಕಾ. ಉತ್ತರದಲ್ಲಿ ಆರ್ಯಾ. ಪೂರ್ವದಲ್ಲಿ ಪ್ರಕಾಶನಿ. ದಕ್ಷಿಣದಲ್ಲಿ ವೈದ್ಯುತಾ ಎಂದು.

ನಾಭಿಯ ಕೆಳಗಡೆ ಆರು ಅಂಗುಲದಿಂದ ಪ್ರಾರಂಭಿಸಿ ಪಂಚನಾಡಿಗಳಲ್ಲಿ ಷಟ್‌ಚಕ್ರಗಳು ಅಥವಾ ಷಟ್‌ಪದ್ಮಗಳಿವೆ. ಅವುಗಳಲ್ಲಿ ಮೊದಲಿಗೆ ಮೂಲಾಧಾರದಲ್ಲಿ ಐದು ನಾಡಿಗಳಲ್ಲಿ ಐದು ಚತುರ್ದಲರಕ್ತ ಪದ್ಮಗಳಿವೆ. ಅವುಗಳ ಮೇಲ್ಭಾಗದಲ್ಲಿರುವ ತ್ರಿಕೋಣ ಅಗ್ನಿಮಂಡಲದಲ್ಲಿ ಶಾರ್ಂಗಧನುಸ್ಸು, ಬಾಣ, ಚಕ್ರ, ಶಂಖಗಳಿಂದ ಯುಕ್ತನಾದ ಹಸುರು ಬಣ್ಣದ ಪ್ರದ್ಯುಮ್ನ ಐದು ರೂಪಗಳಿಂದ ನಿಂತಿದ್ದಾನೆ. ಅದು ಹೇಗೆಂದರೆ ಪಶ್ಚಿಮದ ವಜ್ರಿಕಾ ನಾಡಿಯಲ್ಲಿ ಪದ್ಮದಲ್ಲಿ ಶಾರ್ಂಗಬಾಣ ಚಕ್ರಶಂಖ ಯುಕ್ತನಾದ ಹಸಿರುಬಣ್ಣದ ಪ್ರದ್ಯುಮ್ನ, ಉತ್ತರದಲ್ಲಿರುವ ಆರ್ಯನಾಡಿಯಲ್ಲಿ ಪದ್ಮದ ಮೇಲೆ ನೀಲ ವರ್ಣದವನು ಚಕ್ರಶಂಖ ಖಡ್ಗ ಚರ್ಮಯುಕ್ತನಾದವನು ಅನಿರುದ್ಧನಿರುತ್ತಾನೆ. ಪೂರ್ವದಿಕ್ಕಿನಲ್ಲಿ ಪ್ರಕಾಶಿನೀ ನಾಡಿಯಲ್ಲಿರುವ ಪದ್ಮದ ಮೇಲೆ ಶ್ವೇತವರ್ಣದವನು ಚಕ್ರಶಂಖಗದಾಪದ್ಮಯುಕ್ತನಾದವನು ವಾಸುದೇವನಿರುತ್ತಾನೆ. ದಕ್ಷಿಣದಲ್ಲಿ ವೈದ್ಯುತಾ ನಾಡಿಯಲ್ಲಿರುವ ಪದ್ಮದ ಮೇಲೆ ಕಂದು ಬಣ್ಣದವನು, ಹಲ ಮುಸಲ ಚಕ್ರ ಶಂಖಯುಕ್ತನಾದವನು ಸಂಕರ್ಷಣನಿರುತ್ತಾನೆ. ಮಧ್ಯದ ಬ್ರಹ್ಮನಾಡಿಯಲ್ಲಿ ಪದ್ಮದ ಮೇಲೆ ಕೆಂಪು ಬಣ್ಣದವನು ಚಕ್ರಶಂಖಗದಾಪದ್ಮಧಾರಿ ನಾರಾಯಣನಿರುತ್ತಾನೆ.

ಇವೇ ನಾಡಿಗಳಲ್ಲಿ ನಾಭಿಪ್ರದೇಶದಲ್ಲಿ ಷಟ್‌ದಲ ರಕ್ತ ಪದ್ಮಗಳ ಮೇಲೆ ಷಟ್‌ಕೋಣ ವಾಯುಮಂಡಲಗಳಲ್ಲಿ ಹಿಂದಿನಂತೆಯೇ ಪ್ರದ್ಯುಮ್ನಾದಿಗಳಿದ್ದಾರೆ. ಇವೇ ನಾಡಿಗಳಲ್ಲಿ ಹೃದಯ ಪ್ರದೇಶದಲ್ಲಿ ಅಷ್ಟದಲ ರಕ್ತ ಪದ್ಮಗಳಲ್ಲಿ ದ್ವಾದಶಾರ ಸೂರ್ಯಮಂಡಲಗಳಿವೆ. ಅವುಗಳ ಮೇಲೆ ಹಿಂದಿನಂತೆಯೆ ಪ್ರದ್ಯುಮ್ನಾದಿ ಪಂಚಮೂರ್ತಿಗಳಿದ್ದಾರೆ. ಇವೇ ನಾಡಿಗಳಲ್ಲಿ ತಾಲುಪ್ರದೇಶದಲ್ಲಿ ದ್ವಿದಳ ಬಿಳಿಕಮಲಗಳಲ್ಲಿ ವರ್ತುಲ ಚಂದ್ರಮಂಡಲಗಳಿವೆ. ಅವುಗಳಲ್ಲಿಯೂ ಹಿಂದಿನಂತೆ ಪ್ರದ್ಯುಮ್ನಾದಿ ಪಂಚಮೂರ್ತಿಗಳಿರುತ್ತಾರೆ. ಭ್ರೂಮಧ್ಯ ಪ್ರದೇಶದಲ್ಲಿ ನಾಡಿಗಳಲ್ಲಿ ಚತುರ್ದಲ ಶ್ವೇತಪದ್ಮಗಳ ಮೇಲೆ ವರ್ತುಲ ಚಂದ್ರಮಂಡಲಗಳಿವೆ. ಅಲ್ಲಿಯೂ ಪ್ರದ್ಯುಮ್ನಾದಿ ಪಂಚಮೂರ್ತಿಗಳಿದ್ದಾರೆ. ತಲೆಯಲ್ಲಿಯೂ ನಾಡಿಗಳಲ್ಲಿ ದ್ವಾದಶದಲ ಶ್ವೇತಪದ್ಮಗಳ ಮೇಲೆ ವರ್ತುಲ ಚಂದ್ರಮಂಡಲಗಳಲ್ಲಿ ಹೀಗೇ ಪಂಚ ಮೂರ್ತಿಗಳಿದ್ದಾರೆ.

ಈ ಪಂಚನಾಡಿಗಳ ಸುತ್ತಲೂ ನಾಲ್ಕು ನಾಡಿಗಳಿವೆ. ಪೂರ್ವದಲ್ಲಿ ವಜ್ರಿಕಾ, ಅದರಲ್ಲಿ ವಾಸುದೇವನಿರುತ್ತಾನೆ. ದಕ್ಷಿಣದಲ್ಲಿ ವೈದ್ಯುತಾ ಅದರಲ್ಲಿ ಸಂಕರ್ಷಣ. ಪಶ್ಚಿಮದಲ್ಲಿ ಇಡಾ. ಅದರಲ್ಲಿ ಪ್ರದ್ಯುಮ್ನ . ಉತ್ತರದಲ್ಲಿ ಪಿಂಗಲಾ. ಅದರಲ್ಲಿ ನಾರಾಯಣ . ನಾಲ್ವರೂ ಸಮಾನ ಪ್ರದೇಶದಲ್ಲಿರುತ್ತಾರೆ. ನಾಡೀಗತ ಭಗವದ್ರೂಪಗಳನ್ನು ಹೀಗೆ ಹೇಳಿದ್ದೇವೆ.

ಈ ದೇಹದಲ್ಲಿ ಎಪ್ಪತ್ತೆರಡು ಸಹಸ್ರನಾಡಿಗಳಿವೆ. ಅವುಗಳಲ್ಲಿ ಮೂವತ್ತಾರು ಸಹಸ್ರ ನಾಡಿಗಳು ಎಡದಿಂದ ಬಲಕ್ಕೆ ಹರಡಿವೆ. ಅಷ್ಟೇ ಸಂಖ್ಯೆಯ ನಾಡಿಗಳು ಬಲದಿಂದ ಎಡಕ್ಕೂ ಹರಡಿವೆ. ಹೀಗೆ ಎಪ್ಪತ್ತೆರಡು ಸಾವಿರನಾಡಿಗಳಲ್ಲಿ ಬೃಹತೀ ಋಕ್ಕಿನಲ್ಲಿರುವ ಮೂವತ್ತಾರು ಸಾವಿರ ಸ್ವರ ಮೂವತ್ತಾರುಸಾವಿರ ವ್ಯಂಜನಗಳಿಂದ ಪ್ರತಿಪಾದ್ಯವಾದ ರೂಪಗಳು ಪುರುಷನ ನೂರುವರ್ಷ ಆಯುಷ್ಯದ ಮೂವತ್ತಾರುಸಾವಿರ ಹಗಲು ಮತ್ತು ಮೂವತ್ತಾರುಸಾವಿರ ರಾತ್ರಿಗಳಿಗೆ ನಿಯಾಮಕವಾಗಿ ಇರುತ್ತವೆ. ಅವುಗಳಲ್ಲಿ ರಾತ್ರಿನಿಯಾಮಕಗಳು ಭಗವಂತನ ಸ್ತ್ರೀರೂಪಗಳು. ಹಗಲಿಗೆ ನಿಯಾಮಕಗಳು ಅವನ ಪುರುಷರೂಪಗಳು. ಈ ಸ್ತ್ರೀಪುರುಷರೂಪಗಳು ದಂಪತಿ ರೂಪದಿಂದಿವೆ.

ಮಾನುಷದೇಹೇ ವಿದ್ಯಮಾನ ಭಗವದ್ರೂಪಸಂಖ್ಯಾವಿಚಾರಃ

ಈ ಮನುಷ್ಯಶರೀರದಲ್ಲಿ ಮನುಷ್ಯಾಕಾರದ ಪ್ರದ್ಯುಮ್ನ ಸಂಕರ್ಷಣಾದಿ ರೂಪಗಳು ನಿಯಾಮಕವಾಗಿವೆ. ಈ ಶರೀರದಲ್ಲಿ ಮೂರುವರೆಕೋಟಿ ರೋಮಗಳಿವೆ. ಅವುಗಳಲ್ಲಿ ಹಿಂಕಾರನಾಮಕ ಪ್ರದ್ಯುಮ್ನ ರೂಪವಿದೆ. ಚರ್ಮದಲ್ಲಿ ಪ್ರಸ್ತಾವ ನಾಮಕ ವಾಸುದೇವರೂಪ. ಮಾಂಸದಲ್ಲಿ ಉದ್ಗೀಥನಾಮಕ ನಾರಾಯಣರೂಪ. ಅಸ್ಥಿಗಳಲ್ಲಿ ನಿಧನನಾಮಕ ಸಂಕರ್ಷಣರೂಪ. ಹಾಗೇ ದೇಹದ ಮೇಲ್ಭಾಗದಲ್ಲಿ ಸಂಕರ್ಷಣರೂಪ. ಮಧ್ಯಭಾಗದಲ್ಲಿ ಪ್ರದ್ಯುಮ್ನರೂಪ. ಕೆಳಭಾಗದಲ್ಲಿ ವಾಸುದೇವರೂಪ. ಇಡೀ ದೇಹದಲ್ಲಿ ಅನಿರುದ್ಧರೂಪ. ಕಣ್ಣಿನಲ್ಲಿ ಸೂರ್ಯಾಂತರ್ಗತ ಕಪಿಲರೂಪ. ಹೃದಯದಲ್ಲಿ ಹಂಸರೂಪ. ರೇತಸ್ಸಿನಲ್ಲಿ ಯಜ್ಞಪುರುಷನಾಮಕ ಪ್ರದ್ಯುಮ್ನರೂಪ ಮತ್ತು ಪರಶುರಾಮರೂಪ. ಮೂಗಿನಲ್ಲಿ ಸಂಚರಿಸುವ ವಾಯುವಿನಲ್ಲಿ ನರಸಿಂಹರೂಪ. ಮುನ್ನೂರಅರವತ್ತು ಅಸ್ಥಿಗಳಲ್ಲಿ ಮುನ್ನೂರ ಅರವತ್ತು ರೂಪಗಳು, ಮುನ್ನೂರಅರವತ್ತು ಮಜ್ಜೆಗಳಲ್ಲಿ ಮುನ್ನೂರಅರವತ್ತು ರೂಪಗಳಿವೆ. ತಾಲುವಿನಲ್ಲಿ ಪ್ರದ್ಯುಮ್ನರೂಪವಿದೆ.

ಮನುಷ್ಯರ ಬಲಗಣ್ಣಿನಲ್ಲಿ ವಿಶ್ವ ಎಂಬ ರೂಪವಿದೆ. ಇದಕ್ಕೆ ಹತ್ತೊಂಬತ್ತು ಮುಖಗಳಿವೆ. ಮಧ್ಯಮುಖ ಆನೆಯಂ-ತಿರುವುದರಿಂದ ಈ ರೂಪ ಗಜಾನನ ಎನಿಸಿದೆ. ಇದಕ್ಕೆ ನಾಲ್ಕು ಕೈಗಳು ಏಳು ಅಂಗಗಳು. ಜೀವನ ಜಾಗರ ಅವಸ್ಥೆಗೆ ನಿಯಾಮಕವಾದ ಈ ರೂಪ. ಜಾಗರಾವಸ್ಥೆಯಲ್ಲಿ ಅನುಭವಕ್ಕೆ ಬರುವ ಸಕಲ ಶುಭವಸ್ತುಗಳ ಸಾರಭೋಕ್ತೃವಾಗಿದೆ. ಮನುಷ್ಯರ ಕಂಠದಲ್ಲಿ ಜೀವರ ಸ್ವಪ್ನಾವಸ್ಥೆಗೆ ನಿಯಾಮಕವಾಗಿ ಸ್ವಪ್ನದಲ್ಲಿ ಅನುಭವಕ್ಕೆ ಬರುವ ಸಕಲ ಶುಭವಸ್ತುಗಳ ಸಾರಭೋಕ್ತೃವಾಗಿದೆ. ಮನುಷ್ಯರ ಕಂಠದಲ್ಲಿ ಜೀವರ ಸ್ವಪ್ನಾವಸ್ಥೆಗೆ ನಿಯಾಮಕವಾಗಿ ಸ್ವಪ್ನದಲ್ಲಿ ಅನುಭವಕ್ಕೆ ಬರುವ ಸಕಲ ಶುಭವಸ್ತುಗಳ ಸಾರಭೋಕ್ತೃವಾದ ತೈಜಸ ರೂಪವಿದೆ. ಇದರ ಲಕ್ಷಣ ವಿಶ್ವಮೂರ್ತಿಯಂತೆಯೇ ಇದೆ. ಹೃದಯದಲ್ಲಿ ಸುಷುಮ್ನಾನಾಡಿಯಲ್ಲಿ ಪ್ರಾಜ್ಞ ಎಂಬ ರೂಪವಿದೆ. ಇದು ಸುಷುಪ್ತ್ಯವಸ್ಥಾನಿಯಾಮಕ. ಶಿರಃಕಪಾಲದ ಮೇಲ್ಗಡೆ ಹನ್ನೆ-ರಡಂಗುಲ ಎತ್ತರದಲ್ಲಿ ಮುಕ್ತ್ಯವಸ್ಥಾನಿಯಾಮಕವಾದ ತುರೀಯ ಎಂಬ ರೂಪವಿದೆ. ಇದು ಮುಕ್ತ್ಯವಸ್ಥೆಯಲ್ಲಿ ಜೀವನು ಅನುಭವಿಸುವ ಬಾಹ್ಯವಸ್ತುಗಳ ಸಾರಭೋಕ್ತೃವಾಗಿದೆ. ಈ ಶರೀರದಲ್ಲಿ ಆಯಾ ಪುಣ್ಯಕರ್ಮಾನುಸಾರಿಯಾದ ಜೀವ-ಭೋಗ್ಯ ಶುಭಪದಾರ್ಥಸಾರಭೋಕ್ತೃವಾಗಿ ಆತ್ಮ ಮತ್ತು ಅಂತರಾತ್ಮ ಎಂಬರೂಪಗಳಿವೆ. ಜೀವನಲ್ಲಿ ಜೀವನಿಗೆ ಮನೆಯಂತೆ ಆಶ್ರಯನೀಡುವ ಪರಮಾತ್ಮ ಜ್ಞಾನಾತ್ಮರೂಪಗಳಿವೆ.

ಪ್ರಾಣವಾಯುವಿನಲ್ಲಿ ಯೋಗಪ್ರದವಾಗಿರುವ ಯೋಗ ಎಂಬ ರೂಪವಿದೆ. ಅಪಾನ ವಾಯುವಿನಲ್ಲಿ ಕ್ಷೇಮಪ್ರದ-ವಾಗಿರುವ ಕ್ಷೇಮ ಎಂಬ ರೂಪವಿದೆ. ಕೈಗಳಲ್ಲಿ ಆಯಾಕರ್ಮಗಳಿಗೆ ಪ್ರೇರಕವಾಗಿ ಕರ್ಮನಾಮಕ ರೂಪವಿದೆ. ಪಾದಗಳಲ್ಲಿ ಆಯಾ ಗಮನಗಳಿಗೆ ಪ್ರೇರಕವಾಗಿ ಗತಿ ನಾಮಕ ರೂಪವಿದೆ. ಪಾಯುವಿನಲ್ಲಿ ಮಲವಿಸರ್ಜನಕ್ಕೆ ಪ್ರೇರಕವಾಗಿ ವಿಮುಕ್ತನಾಮಕ ರೂಪವಿದೆ. ಈ ದೇಹದಲ್ಲಿ ಅಹಂಕಾರತತ್ತ್ವಾಭಿಮಾನಿ ರುದ್ರಾಂತರ್ಗತ ಸಂಕರ್ಷಣ ರೂಪವಿದೆ. ಮನೋಭಿಮಾನಿ ಚಂದ್ರಾಂತರ್ಗತ ಚಂದ್ರನಾಮಕ ರೂಪವಿದೆ. ಬುದ್ಧಿಪ್ರೇರಕವಾದ ಉಮಾಂತರ್ಗತ ಸ್ತ್ರೀರೂಪವಿದೆ. ಚಿತ್ತ ಪ್ರೇರಕ ವಿಷ್ಣುನಾಮಕ ರೂಪವಿದೆ. ಕಿವಿಗಳಲ್ಲಿ ಶ್ರವಣಶಕ್ತಿ ನೀಡುವ ದಿಗ್ದೇವತಾಂತರ್ಗತ ತನ್ನಾಮಕ ವಿಷ್ಣುರೂಪವಿದೆ. ಕಣ್ಣುಗಳಲ್ಲಿ ಅವುಗಳ ಅಭಿಮಾನಿ ಸೂರ್ಯನಲ್ಲಿ ತನ್ನಾಮಕ ರೂಪವಿದೆ. ತ್ವಗಿಂದ್ರಿಯದಲ್ಲಿ ವಾಯ್ವಂತರ್ಗತ ವಾಯುನಾಮಕ ರೂಪವಿದೆ. ರಸನೇಂದ್ರಿಯದಲ್ಲಿ ವರುಣಾಂತರ್ಗತ ವರುಣನಾಮಕ ರೂಪವಿದೆ. ಘ್ರಾಣೇಂದ್ರಿಯದಲ್ಲಿ ಅಶ್ವಿನ್ಯಂತರ್ಗತ ಅಶ್ವಿನಾಮಕರೂಪವಿದೆ. ವಾಗಿಂದ್ರಿಯದಲ್ಲಿ ಅಗ್ನ್ಯಂತರ್ಗತ ಪರಶುರಾಮ ರೂಪವಿದೆ. ಕೈಗಳಲ್ಲಿ ದಕ್ಷಾಂತರ್ಗತ ದಕ್ಷನಾಮಕ ರೂಪವಿದೆ. ಕಾಲುಗಳಲ್ಲಿ ಜಯಂತಾಂತರ್ಗತ ಜಯಂತನಾಮಕ ರೂಪವಿದೆ. ಪಾಯುವಿನಲ್ಲಿ ಮಿತ್ರಾಂತರ್ಗತ ಮಿತ್ರನಾಮಕ ರೂಪವಿದೆ. ಗುಹ್ಯದಲ್ಲಿ ಮನ್ವಂತರ್ಗತ ಗುಹ್ಯ ನಾಮಕ ರೂಪವಿದೆ.

ಹೀಗೆ ಹರಿಯಲ್ಲಿ ಅದ್ಭುತ ಚರಿತ್ರೆಗಳು ಅನಂತಕ್ರಿಯೆಗಳು ಅನಂತ ಮಹಿಮೆಗಳು ಇವೆ. ಹೇಗೆಂದರೆ ಈ ದೇಹದಲ್ಲಿ ಒಂಬತ್ತು ಕೋಟಿ ದೇವತೆಗಳಿದ್ದಾರೆ. ಅವರ ದೇಹದಲ್ಲಿ ಕೆಳಕೆಳಗಿನವರಿಗೆ ಮೇಲು ಮೇಲಿನವರು ನಿಯಾಮಕರಾಗಿದ್ದಾರೆ. ಅವರ ಶರೀರದಲ್ಲಿ ಹಿಂದೆ ಹೇಳಿದ ಕ್ರಮದಂತೆ ನಿಯಾಮಕವಾಗಿ ಭಗವದ್ರೂಪಗಳ ಸಮೂಹಗಳೇ ಇವೆ. ಈ ಶರೀರದಲ್ಲಿ ಜೀವನಿಗೆ ಅನಂತ ಕರ್ಮಗಳಿವೆ. ಅವುಗಳಿಗೆ ಅನಂತ ಅಭಿಮಾನಿಗಳಿದ್ದಾರೆ. ಅವರಲ್ಲಿ ಅನಂತ ಭಗವದ್ರೂಪಗಳು. ದೇಹದಲ್ಲಿ ಲಕ್ಷ್ಮೀ ಅನಂತ ರೂಪಗಳಿಂದ ಪರಮಾತ್ಮನ ಆರಾಧನೆ ಮಾಡುತ್ತಾಳೆ. ಬ್ರಹ್ಮವಾಯು ಭಾರತೀ ಸರಸ್ವತೀಯರು ಅನಂತಾನಂತ ರೂಪಗಳಿಂದ ಲಕ್ಷ್ಮಿಯ ಆರಾಧನೆ ಮಾಡುತ್ತಾರೆ. ಹೀಗೆ ಲಕ್ಷ್ಮಿಯ ಮಹಿಮೆಯಿದೆ. ಬ್ರಹ್ಮವಾಯುಗಳಿಗೂ ಅನಂತಾನಂತ ರೂಪಗಳಿವೆ. ಅವುಗಳಿಗೆ ನಿಯಾಮಕವಾಗಿ ಭಗವಂತನ ಅನಂತ ರೂಪಗಳಿವೆ. ಹೀಗೇ ಸರಸ್ವತೀ ಭಾರತೀ ರೂಪಗಳು ಅನಂತ ಇವೆ. ಅವುಗಳಿಗೆ ನಿಯಾಮಕವಾಗಿ ಅನಂತ ಭಗವದ್ರೂಪಗಳಿವೆ.

ಈ ದೇಹದಲ್ಲಿ ಸುಷುಮ್ನಾನಾಡೀಮಧ್ಯದಲ್ಲಿ ಹೃದಯಪ್ರದೇಶದಲ್ಲಿ ಅಷ್ಟದಳ ಪದ್ಮದ ಮೇಲೆ ದ್ವಾದಶ ಗರುಡಾದಿ ದೇವತಾತ್ಮಕವಾದ ಪೀಠದಲ್ಲಿ ವಿಮಲಾದಿ ಭಗವದ್ರೂಪಗಳಿವೆ. ಆ ಪೀಠದ ಕೆಳಗೆ ನಾಲ್ಕು ದಿಕ್ಕುಗಳಲ್ಲಿ ಸೋಪಾನರೂಪವಾಗಿ ಆತ್ಮ ಅಂತರಾತ್ಮ ಪರಮಾತ್ಮ ಜ್ಞಾನಾತ್ಮ ರೂಪಗಳಿವೆ. ಈ ಪೀಠದ ಮೇಲೆ ಲಕ್ಷ್ಮ್ಯಾತ್ಮಕವಾದ ಅಷ್ಟದಳ ಪದ್ಮದಲ್ಲಿ ವಿಶ್ವಾದಿ ಅಷ್ಟಮೂರ್ತಿಗಳಿವೆ. ಕರ್ಣಿಕಾ ಮಧ್ಯದಲ್ಲಿ ಶ್ರೀನಾರಾಯಣ ಸ್ವಮೂರ್ತಿಗಣಮಧ್ಯದಲ್ಲಿದ್ದಾನೆ. ಸ್ವಮೂರ್ತಿಗಳು ಕೃದ್ಧೋಲ್ಕಾದಿ ಐದು. ವಾಸುದೇವಾದಿನಾಲ್ಕು. ಕೇಶವಾದಿ ಇಪ್ಪತ್ತನಾಲ್ಕು. ಮತ್ಸ್ಯಾದಿ ಹನ್ನೆರಡು. (ದಶಾವತಾರಗಳೊಂದಿಗೆ ಅನಂತ ವಿಶ್ವರೂಪ ಎಂಬ ಎರಡನ್ನು ಸೇರಿಸಿ ಮತ್ಸ್ಯಾದಿಗಳು ಹನ್ನೆರಡು.) ಶಕ್ತಿ ಪ್ರತಿಷ್ಠಾದಿಗಳು ಹನ್ನೊಂದು. ಇವು ಸ್ವಮೂರ್ತಿಗಳು. ಈ ಮೂರ್ತಿಗಳ ಮಧ್ಯದಲ್ಲಿ ನಾರಾಯಣನಿರುತ್ತಾನೆ. ಅವನ ಸ್ಥಾನ ಲಕ್ಷ್ಮ್ಯಾತ್ಮಕವಾದ ಮಂಟಪ. ಆ ಮಂಟಪಕ್ಕೆ ಐದು ದ್ವಾರಗಳು (ನಾಲ್ಕು ದಿಕ್ಕುಗಳಲ್ಲಿ ನಾಲ್ಕು, ಮೇಲ್ಗಡೆ ಒಂದು, ಹೀಗೆ ಐದು ದ್ವಾರಗಳು.) ಪೂರ್ವಾದಿ ಐದುದ್ವಾರಗಳಲ್ಲಿ ಪ್ರಾಣಾಪಾನಾದಿ ನಾಮಕರಾದ ಸೂರ್ಯ ಚಂದ್ರ ಅಗ್ನಿ ಇಂದ್ರ ವಾಯುಗಳು ಕ್ರಮವಾಗಿ ದ್ವಾರಪಾಲಕರು. ಶ್ರೀದೇವಿ ಪ್ರಾಣ ಭಾರತಿಯರು ಎಲ್ಲದ್ವಾರಗಳಿಗೂ ಪಾಲಕರು. ಹೀಗೆ ಇದೆಲ್ಲವೂ ಅತ್ಯಂತ ಮಂಗಳಕರವಾಗಿದೆ.

ಹೀಗೆ ಶ್ರೀರಾಘವೇಂದ್ರತೀರ್ಥರು ರಚಿಸಿದ ಮಾನುಷದೇಹದಲ್ಲಿರುವ ಭಗವದ್ರೂಪಸಂಖ್ಯಾವಿಚಾರ ಎಂಬ ಗ್ರಂಥದ ಅನುವಾದ ಸಮಾಪ್ತವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

★ ★ ★